MATTER UNDER RULE 312

re : Fire accident at Bambu Bazar Bangalore

† ಶ್ರೀಮತಿ ಎಸ್. ಪ್ರಮೀಳಾ.—ಮಾನ್ಯ ಅಧ್ಯಕ್ಷರೇ ಬಂಬೂ ಬಜಾರ್‌ನಲ್ಲಿ ಮೊನ್ನೆ ನಡೆದ ಅಗ್ನಿ ಅನಾಹುತದ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ನಾನು ಚುನಾವಣೆಯಲ್ಲಿ ಗೆದ್ದು ಬಂದಮೇಲೆ ನನ್ನ ಕ್ಷೇತ್ರದಲ್ಲಿ ಇದು ಎರಡನೆಯ ಭಾರಿ ಆಗಿರತಕ್ಕಂಥ ಅಗ್ನಿ ಅನಾಹುತ. ಆಕಸ್ಮಿಕ ಅಂತ ಹೇಳಿದರೂ, ದುರುದ್ದೇಶದಿಂದ ಕೂಡಿದ್ದು ಅಂತ ಈ ಸಂದರ್ಭದಲ್ಲಿ ಹೇಳಬಹುದು. ಹೋದಸಾರಿ ಫೈರ್‌ಮ್ಯಾನ್ ಒಬ್ಬರು ಅಗ್ನಿ ಅನಾಹುತದಲ್ಲಿ ಪ್ರಾಣ ಅರ್ಪಿಸಿದರು. ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಲಕ್ಷ್ಮಣರಾಯರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪೋಲೀಸ್ ರಿಪೋರ್ಟ್ ಮತ್ತು ಅಡ್ಮಿನಿಸ್ಟ್ರೇಟರ್ ರಿಪೋರ್ಟನ್ನು ತರಿಸಿಕೊಂಡಿದ್ದರು. ತಕ್ಷಣ ಬಂಬೂ ಬಜಾರನ್ನು ಬೇರೆ ಕಡೆ ಷಿಫ್ಟ್ ಮಾಡಿ ಆಗಾಗ್ಗೆ ಆಗತಕ್ಕ ಅಗ್ನಿ ಅನಾಹುತವನ್ನು ತಪ್ಪಿಸುವ ವ್ಯವಸ್ಥೆ ಮಾಡುತ್ತೇನೆಂದು ಹೇಳಿದರು ಒಂದು ವರ್ಷ ಆದರೂ ಅದರ ಪರಿಣಾಮ ಇನ್ನೂ ಕೂಡ ಷಿಫ್ಟ್ ಆಗಿಲ್ಲ. ಮೊನ್ನೆ ನಡೆದ ಅಗ್ನಿ ಅನಾಹುತದಲ್ಲಿ ೧೫ ಅಂಗಡಿಗಳು ಸುಟ್ಟು ಹೋಗಿವೆಯೆಂದು ಅವರ ಹೇಳಿಕೆಯಲ್ಲಿಯೇ ತಿಳಿಸಿದ್ದಾರೆ. ಅದು ಪತ್ರಿಕೆಯಲ್ಲಿ ಕೂಡ ಬಂದಿದೆ. ಆ ಪೈಕಿ ಸುಮಾರು ೪ ಅಂಗಡಿಗಳವರು ಮಾತ್ರ ಇನ್ಸೂರೆನ್ಸ್ ಮಾಡಿಸಿದ್ದಾರೆ. ಮಿಕ್ಕ ಅಂಗಡಿಗಳವರು ಮಾಡಿಸಿಲ್ಲ. ಮಾನ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಪರಿಹಾರ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ ಪತ್ರಿಕೆಗಳಲ್ಲಿ ಕೂಡ ಬಂದಿದೆ. ನಾನು ಇವತ್ತು ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ ತಾವು ಯಾರಿಗೆ ಪರಿಹಾರ ಕೊಟ್ಟಿದ್ದೀರಿ ? ಇನ್ಸೂರೆನ್ಸ್ ಮಾಡಿರತಕ್ಕ ಅಂಗಡಿಗಳವರಿಗೆ ಪರಿಹಾರ ಕೊಟ್ಟಿದ್ದೀರೋ? ಅಥವಾ ಇನ್ಸೂರೆನ್ಸ್ ಮಾಡಿಲ್ಲದ ಅಂಗಡಿಗಳವರಿಗೆ ಪರಿಹಾರ ಕೊಟ್ಟಿದ್ದೀರೋ ? ಇನ್ಸೂರೆನ್ಸ್ ಮಾಡಿರುವವರಿಗೆ ಮತ್ತೆ ಪರಿಹಾರ ಕೊಟ್ಟು ಇನ್ನೂ ಅವರನ್ನು ಹೆಚ್ಚು ಸಾಹುಕಾರರನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ತಿಳಿಸಬೇಕು. ಟಿಂಬರ್‌ಯಾರ್ಡನ್ನು ಷಿಫ್ಟ್‌ಮಾಡುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಇಲ್ಲಿ ಮಾತ್ರ ಕೊಟ್ಟಿಲ್ಲ. ಕಾಟನ್‌ಪೇಟೆಯಲ್ಲಿರತಕ್ಕ ಟಿಂಬರ್‌ಯಾರ್ಡನ್ನು ಮೈಸೂರುರೋಡಿಗೆ ಷಿಫ್ಟ್ ಮಾಡಬೇಕೆಂದು ಹಲವಾರು ವರ್ಷಗಳ ಹಿಂದೆ ತೀರ್ಮಾನ ತೆಗೆದುಕೊಂಡಿದ್ದರೂ ಸಹ ಅದನ್ನು ಪರಿಣಾಮಕಾರಿಯಾಗಿ ಇನ್ನೂ ಷಿಫ್ಟ್ ಮಾಡಿಲ್ಲ. ಈ ಸಂದರ್ಭದಲ್ಲಿ ಬಂಬೂ ಬಜಾರನ್ನು ಟಿಂಬರ್‌ಯಾರ್ಡ್‌ಗೆ ಷಿಫ್ಟ್ ಮಾಡುವುದರ ಅಗತ್ಯವೇನು? ಬೆಂಗಳೂರಿನಲ್ಲಿ ಯಾರಾದರೂ ಸತ್ತರೆ ಅವರ ಹೆಣ ಸುಡಲು ಬಂಬು ಬೇಕಾಗುತ್ತದೆ. ಟಿಂಬರ್‌ಯಾರ್ಡಗೆ ಷಿಫ್ಟ್ ಮಾಡಿದರೆ ಹೆಣ ಸುಡುವುದಕ್ಕೆ ತಕ್ಷಣ ಬೇಕಾಗುವಂತ ಬಂಬುಗಳನ್ನು ಎಲ್ಲಿಂದ ತರಬೇಕು. ಆದ್ದರಿಂದ ಸಿಟಿನಲ್ಲೂ ಕೂತ ಒಂದು ಸಣ್ಣ ಅಂಗಡಿಯನ್ನು ಇಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಸುಮಾರು ೧೫ ಅಂಗಡಿಗಳು ನಷ್ಟಕ್ಕೆ ಗುರಿಯಾಗಿ ಲುಕ್ಸಾನಾಗಿವೆ ಎಂದು ಹೇಳಿದ್ದೀರಿ ನಿಜವಾಗಿಯೂ ನಷ್ಟವಾಗಿದ್ದರೆ ಇದಕ್ಕೆ ಕಾರಣ ಕರ್ತರು ಯಾರು ? ನನಗೆ ತಿಳಿದಂತೆ ಪಕ್ಕದಲ್ಲಿರುವ ಒಂದು ಸಾಮಿಲ್ ನಿಂದ ಪವರ್ ಶಾರ್ಟ್ ಸರ್ಕ್ಯೂಟ್ ಆಗಿ ಈ ದುರಂತವಾಗಿದೆಯೆಂದು ತಿಳಿದುಬಂದಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಬಂಬೂ ಬಜಾರನ್ನು ಎಷ್ಟು ಕಾಲದಲ್ಲಿ ಷಿಫ್ಟ್ ಮಾಡುತ್ತೀರಿ ತಿಳಿಸಬೇಕು. ಅಲ್ಲದೆ, ಪೋಲೀಸ್ ಅಧಿಕಾರಿ ಕಾರ್ತಿಕೇಯನ್ ಅವರ ಕಾಲಿಗೆ ಫ್ರಾಕ್ಚರ್ ಆಗಿದೆಯೆಂದು ತಿಳಿದು ಕೊಂಡಿದ್ದೇನೆ. ವಾಸಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅವರಿಗೆ ಏನಾದರೂ ಪರಿಹಾರಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ? ಈ ದುರಂತದ ಬಗ್ಗೆ ಪೋಲೀಸ್ ಕಮೀನಷರ್ ಅವರ ವರದಿ ಮತ್ತು ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್ ಅವರ ವರದಿಯನ್ನು ಈ ಸಭೆ ಮುಂದೆ ಇಡಬೇಕೆಂದು ಹೇಳುತ್ತೇನೆ. ಆದಷ್ಟು ಬೇಗ ಬಂಬು ಬಜಾರನ್ನು ಷಿಫ್ಟ್ ಮಾಡಿ ಮುಂದೆ ಇಂಥ ಅನಾಹುತಗಳು ನಡೆಯದಂತೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

SRI R. GUNDU RAO. (Chief Minister)—I wish to make the following Statement.

---

† Indicates that remarks or speeches have not been revised by the member concerned.

On 23--2-80 the Fire Control Room received a message at 4 A. M. that fire had broken out at Bamboo Bazar, Kalasipalyam, Bangalore Two fire units,each from Bangalore North Fire Station and Bangalore Highground Fire Station, were turned up to the accident spot. Both Fire Units on reaching the spot at 04.06 hours noticed that Bamboo Bazar was engulfed in a huge fire. Fire fighting operations were immediately commenced. A message was sent to the Fire Control Room to depute more fire units as the fire was spreading to the neighbouring bamboo shops. At 04 32 hours, the Chief Fire Officer and the Divisional Fire Officer arrived at the accident spot along with two more fire units. Both these units were also pressed into operation. The Chief Fire Officer, on studying the situation summoned all the remaining fire units with the personnel. The fire was fought from every angle and it was not allowed to spread towards any other direction. In all, 11 water tenders, 2 portable pumbs, I trailor pump. 2 water lorries and 91 fire force personnel were used in fighting the fire. The fire was brought under control by 08.00 hours. After fighting the same continously for four hours the fire was completely extinguished by 3.00 P. M. The fire was fought courageously and tactfully by the fire force personnel and it was not allowed to spread to the neighbouring shops. The Director of Fire Force visited the spot at 05.15 hours and supervised the fiire fighting operation.

The exact cause for the fire accident is not known, but it is reported that an electrical short circuit at National Wood Industries and Saw Mills might have lead to fire accident. The timber Merchants' Association have estimated that the approximate loss due to fire in 17 shops at Rs. 10,92,000. Four Fire Force Personel, Deputy Commissioner of Police (West) and an Instructor of the Home Guards and Civil Defence Department were injured in the fire accident. All of them were treated as out-patients in the Govt. Hospital. The Bangalore City Police and the Home Guards extended all co-operation in cardoning of the area. ಮಾನ್ಯ ಸದಸ್ಯೆಯರಾದ ಶ್ರೀಮತಿ ಪ್ರಮೀಳಾರವರು ಏನು ಹೇಳಿದ್ದಾರೆ ಆ ಕಾರಣ ಗೊತ್ತಿಲ್ಲ. ಯಾವ ಕಾರಣದಿಂದ ಈ ಅನಾಹುತ ವಾಯಿತೆಂಬುದು ಗೊತ್ತಿಲ್ಲ. ನಾನು ಹೇಳಿದ ಪ್ರಕಾರ ಷಾರ್ಟ್‌ಸರ್ಕ್ಯೂಟ್ ಆಗಿ ಇದು ಆಗಿದೆ. ಹಿಂದೆ ಕೂಡ ಇಲ್ಲಿ ಇಂಥ ಅನಾಹುತ ನಡೆದಿದ್ದು ನಿಜ. ಆ ಜಾಗವನ್ನು ಸ್ಥಳಾಂತರಿಸಬೇಕೆಂದು ಕಾರ್ಪೊರೇಷನ್ ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರು. ನಾನಾ ಕಾರಣಗಳಿಂದ ಸ್ಥಳಾಂತರ ಇನ್ನೂ ಮಾಡಿಲ್ಲ. ತನೇಯದಾಗಿ ಟಿಂಬರ್‌ಯಾರ್ಡ್ ವಿಚಾರ ಹೇಳಿದ್ದಾರೆ. ಹೊಸ ಜಾಗದಲ್ಲಿ ಕೆಲವರಿಗೆ ಯೋಗ್ಯ ಜಾಗಗಳನ್ನು ಅಲಾಟ್ ಮಾಡದೇ ಇರುವುದು ವ್ಯಾಪಾರಿಗಳಿಗೆ ತಮ್ಮ ವ್ಯಾಪಾರ ಕಡಿಮೆಯಾಗುತ್ತದೆಂದು ಹೇಳುವುದು ಇದೆ. ಒಟ್ಟಿನಲ್ಲಿ ಇನ್ನು ಸ್ಥಳಾಂತರ ಮಾಡಿಲ್ಲ. ನಾನು ಡೆಲ್ಲಿ ಯಿಂದ ಬಂದತಕ್ಷಣ ಏರ್‌ಪೋರ್ಟ್‌ನಿಂದ ನೇರವಾಗಿ ಆ ಜಾಗಕ್ಕೆ ಹೋದರೆ ಸುಮಾರು ೫೦೦ ಜನ ಅಲ್ಲಿದ್ದರು ತೊಂದರೆಗೆ ಒಳಗಾದವರನ್ನು ವಿಚಾರ ಮಾಡಿದಾಗ ಅವರು ನಮಗೆ ಸರಿಯಾದ ಜಾಗವನ್ನು ಅಲಾಟ್ ಮಾಡಿಕೊಟ್ಟರೆ ನಮ್ಮ ವಿರೋಧ ಇಲ್ಲ ನೀವು ಒಂದು ಸಭೆ ಕರೆದರೆ ನಾವು ಸಲಹೆ ಕೊಡುತ್ತೇ

ವೆಂದು ಹೇಳಿದ್ದಾರೆ. ನಾನು ನಮ್ಮ ಹೊಸ ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳಿಗೆ ಹೇಳಿ, ಕಾರ್ಪೊರೇಷನ್ ಅಧಿಕಾರಿಗಳನ್ನು ಕರೆಸಿ, ಬೆಂಗಳೂರು ನಗರದ ಶಾಸಕರನ್ನು ಕರೆಸಿ, ಯಾವ ಭಾಗಕ್ಕೆ ವರ್ಗಾಯಿಸಬೇಕೆಂಬ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ನನ್ನ ಅಭಿಪ್ರಾಯವನ್ನು ಈಗಾಗಲೇ ವ್ಯಕ್ತ ಪಡಿಸಿದ್ದೇನೆ. ತಾವು ಎಷ್ಟು ಆತುರರಾ ದ್ದಿರೋ ಸರ್ಕಾರವು ಕೂಡ ಅಷ್ಟೇ ಆತುರವಾಗಿದೆ. ಕಾಲಕ್ಕೆ ಸರಿಯಾಗಿ ಪೋಲೀಸ್ ಇಲಾಖೆ ಮತ್ತು ಅಗ್ನಿಶಾಮಕ ದಳದವರು ಹೋಗಿ ಕೆಲಸ ಮಾಡದೇ ಇದ್ದರೆ ನೂರಾರು ಜನ ಪ್ರಾಣ ಕಳೆದುಕೊಂಡು ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿತ್ತು. ಈ ವಿಚಾರದಲ್ಲಿ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

Financial Business

Supplementary Estimates-1979-80

MR. SPEAKER.—Now the Hon. Minister for Finance will present Supplementary Estimates for the year 1979-80 (First Instalment) as required under Article 205(1) of the Constitution of India.

SRI M. VEERAPPA MOILY.—Sir, I beg to present the Supplementary Estimates for the year 1979-80 (First Instalment) as required under Article 205 (1) of the Constitution of India.

MR. SPEAKER.-The Supplementary Estimates for the year 1979-80 (First Instalment) as required under Article 205(1) of the Constitution of India is presented.

OFFICIAL RESOLUTION.—Ratification of Amendment to the Constitution

MR. SPEAKER.—Now, SRI Y. RAMAKRISHNA (Minister for Law and Parliamentary Affairs)will move the Official Resolution.

SRI Y. RAMAKRISHNA (Minister for Law and Parliamentary Affairs).—I beg to move

> "That this House ratifies the amendment to the Constitution of India falling within the purview of the proviso to clause(2) of article 368 there of, proposed to be made by the Constitution (Forty-fifth Amendment) Bill, 1980, as passed by the two Houses of Parliament".

The questions was proposed

SRI Y. RAMAKRISHNA (Minister for Law and Parliamentary Affairs).—Sir, the amendment is a very simple one which requires no elaborate discussion. In the Annexure to the amendment, the reasons for the amendment are made clear.

> "Article 334 of the Constitution lays down that the provisions of the Constitution relating to the reservation of seat for the Scheduled Castes/Scheduled Tribes and the represen-